DC-842
T.P-2

51st Year of Publication ★ SATYAVADI Daily, MYSORE 4

Reg No B G 155 26-7-1968

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ

ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆಯೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6

ಸತ್ಯವಾದಿ

Space available
For Permanent Advertisement

ಸ್ಥಾಪಕರು : ಅನುಸೂಚಿತ ಜಾತಿಗಳ ಎಂ. ಏ. ಸುಬ್ಬಯ್ಯನವ್ ಸಂಸ್ಥಾಪಕ : ಧರ್ಮಪ್ರಜ್ಞಾವನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಕೇಂದ್ರ ಸರ್ಕಾರಿ ನೌಕರರ ಸಾಂಕೇತಿಕ ಮುಷ್ಕರ

ಮೈಸೂರು ಅರಣ್ಯ ಇಲಾಖೆ
ಮೈಸೂರು ಅರಣ್ಯ ವಿಭಾಗ
ಪ್ರಕಟಣೆ ನಂ. ಡಿಎಂಎ/19-79/
ಇಂಟಿ/ (ಬಿಡಿಎಸ್) 1968-69.

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ತಾ. 16 ನೇ ಜುಲೈ 1968.

" 1968 - 69 ನೇ ಸಾಲಿನಲ್ಲಿ ಮೈಸೂರು ರೇಂಜಿನ ಮೈಸೂರಿನಲ್ಲಿರುವ ಸರ್ಕಾರದ ವುಡ್‌ಯಾರ್ಡ್ ಮತ್ತು ಗಂಧದ ಡಿಪೋವಿನ ಪ್ರದೇಶವಲ್ಲಿ ಬೀಜಗಳನ್ನು ಸಂಗ್ರಹಿಸಲು ಕಟ್ಟಡವನ್ನು ನಿರ್ಮಿಸಲು ಟೆಂಡರು " ಎಂದು ಬರೆದ ಮತ್ತು ಟೆಂಡರುದಾರರಿಂದ ಸಹಿಯಾದ ಸೀಲಾದ ಟೆಂಡರುಗಳನ್ನು ಮೈಸೂರು-5ರಲ್ಲಿರುವ ಮೈಸೂರು ವಿಭಾಗದ ವಿಭಾಗದ ಅರಣ್ಯ ಅಧಿಕಾರಿಗಳಿಂದ ಆಥವಾ ಈ ಉದ್ದೇಶಕ್ಕಾಗಿ ಅವರಿಂದ ಅಧಿಕಾರ ಪಡೆದ ಇತರ ಯಾವುದೇ ಅಧಿಕಾರಿಯವರಿಂದ 2 ನೇ ಆಗಸ್ಟ್ 1968 ರ ಮಧ್ಯಾಹ್ನ 4 ಗಂಟೆವರಿಗೆ, ಅಪೇಕ್ಷೆಯುಳ್ಳ ಜನರಿಂದ ಆಹ್ವಾನಿಸಲಾಗಿದೆ. ಹಾಜರಿರುವ ಟೆಂಡರುದಾರರು ಅಥವಾ ಹಾಜರಿರಲು ಇಚ್ಛಿಸುವ ಅವರ ಅಧಿಕೃತ ಪ್ರತಿನಿಧಿಗಳ ಎದುರು ಅದೇ ದಿನ ಮಧ್ಯಾಹ್ನ 4-15 ಗಂಟೆಗೆ ಟೆಂಡರ್‌ಗಳನ್ನು ಒಡೆಯಲಾಗುವುದು.

ಕೆಲಸದ ಅಂದಾಜು ಮೌಲ್ಯ ರೂ. 4,850/- (ನಾಲ್ಕು ಸಾವಿರದ ಏಂಟು ನೂರು ಐವತ್ತು ರೂ. ಗಳು) ಮಾತ್ರ.

ಆರ್ನೆಸ್ಟ್ ಹಣದ ಠೇವಣಿ ರೂ. 125/- (ನೂರಿಪ್ಪತ್ತೈದು ರೂ. ಗಳು) ಮಾತ್ರವಿದ್ದು ಮೈಸೂರಿನಲ್ಲಿರುವ ವಿಭಾಗ ಅರಣ್ಯಾಧಿಕಾರಿಗಳ ಪರವಾಗಿ ಮೈಸೂರಿನಲ್ಲಿರುವ ಸ್ಟೇಟ್ ಬ್ಯಾಂಕ್ ಮೈಸೂರ್‌ಗೆ ಪಾವತಿ ಮಾಡುವುದು ಮತ್ತು ಹೂಪ್ಲಿ ಕೇಟ್ ಚಲನ್ನನ್ನು ಟೆಂಡರ್‌ಗಳಿಗೆ ಲಗತ್ತಿಸತಕ್ಕದ್ದು.

ಪ್ರತಿ ಟೆಂಡರ್ ಫಾರಂ ಮೌಲ್ಯ ರೂ. 5/- (ಐದು ರೂ.) ಮಾತ್ರ.

ನಾಣ್ಯಗಳು

ನವದೆಹಲಿ— ರೂ. 100 ರತನಕ ನಾಣ್ಯಗಳನ್ನು ಜಾರಿಗೆ ತರುವ ಮಸೂದೆಯನ್ನು ರಾಜ್ಯಸಭೆ ಮಂಜೂರ್ಮಾಡಿತು.

★

ನೌಕರರ ಪ್ರತಿನಿಧಿಗಳಿಗೆ ಆಹ್ವಾನ

ನವದೆಹಲಿ— ಕೇಂದ್ರ ಸರಕಾರದ ನೌಕರರ ಪ್ರತಿನಿಧಿಗಳನ್ನು, ಉಪಪ್ರಧಾನಿಯವರನ್ನು, ಕಾಮಿಕ್ಷ ಸಚಿವರನ್ನು, ಮತ್ತು ತಮ್ಮನ್ನು ತಾ || 27 ರಂದು ಕಾಣುವಂತೆ ಆಹ್ವಾನಿಸಿರುವುದಾಗಿ ಗೃಹಸ್ಥಾಶ್ರಿ ಚವನರು ಆಹ್ವಾನಿಸಿರುವರು — ತುಟ್ಟಿ ಭತ್ಯೆ ಮತ್ತಿತರ ವಿಷಯಗಳನ್ನು ಪರ್ಯಾಲೋಚಿಸಲು ಇದು — ಮುಷ್ಕರವನ್ನು ಹಿಂತೆಗೆದುಕೊಳ್ಳಬೇಡಿಂದಿರುವರು.

★

ಕಳ್ಳನ ಪತ್ತೆಗಾಗಿ

ಬೆಂಗಳೂರು— ತರೀಕೆರೆಯಲ್ಲಿ ತಾ || 23 ರಲ್ಲಿ ರಾಜಮಾರ್ಗದಲ್ಲಿ ನಡೆದ ದರೋಡೆ ಸಂಬಂಧದಲ್ಲಿ ಸುಳುವು ಕೊಟ್ಟವರಿಗೆ ರೂ. 500 ನಗದು ಬಹುಮಾನ ಕೊಡುವುದಾಗಿ ಐ ಜಿ ಪಿ ಪ್ರಕಟಿಸಿದ್ದಾರೆ.

31-12-1968 ರ ವೇಳೆಗೆ ಕೆಲಸ ಮುಗಿಯಬೇಕು.

ಹೆಚ್ಚು ವಿವರಗಳೇನಾದರೂ ಬೇಕಾಗಿದ್ದರೆ ಮೈಸೂರು ನಲ್ಲಿರುವ ಮೈಸೂರು ವಿಭಾಗದ ವಿಭಾಗದ ಅರಣ್ಯ ಅಧಿಕಾರಿಯವರಿಂದ ಕೆಲಸದ ಯಾವುದೇ ದಿನಗಳಲ್ಲಿ ಕೆಲಸದ ವೇಳೆಗಳಲ್ಲಿ ಪಡೆಯಬಹುದು.

— ಬಿ. ಬಾಲಯ್ಯ,
ವಿಭಾಗ ಅರಣ್ಯ ಅಧಿಕಾರಿಯವರು,
ಮೈಸೂರು ವಿಭಾಗ, ಮೈಸೂರು.

ಪಿಐಡಿ 977/68

ದಿ॥ ರಾಬರ್ಟ್ ಕೆನಡಿ ಆಸ್ತಿ

ನ್ಯೂಯಾರ್ಕ್— ದಿ॥ ಕೆನಡಿಯವರ ಆಸ್ತಿ ನ್ಯೂಯಾರ್ಕ್ ರಾಜ್ಯದಲ್ಲಿ 250 ಸಾವಿರ ಡಾಲರುಗಳಿಂದ 300 ಸಾವಿರ ಡಾಲರುಗಳಷ್ಟಿವೆ — ಇದು ಅವರ ಪೂರ್ತಾ ಆಸ್ತಿಯಲ್ಲಿ ಒಂದು ಲೇಶವಾಗಿವೆ — ಕೆನಡಿಯರುಗಳ ತಂದೆ 400 ಮಿಲಿಯ ಡಾಲರುಗಳಷ್ಟು ಮಾಡಿದ್ದರೆಂದು ಹೇಳಲಾಗಿದೆ.

★

ಗಾಂಜಾ ವಶ

ಮದ್ರಾಸು— ಕಳ್ಳತ್ತಾತಿಂದ ಬಂಡ ರೂ. 800 ಬೆಲೆಯ ಗಾಂಜಾವನ್ನು ವಿಮಾನಾಂಬಿಕಂ ವಿಮಾನ ನಿಲ್ದಾಣದಲ್ಲಿ ಕಸ್ಟಂಸ್ ಅಧಿಕಾರಿಗಳು ವಶಪಡಿಸಿಕೊಂಡರು.

★

ಕಾಂಗ್ರೆಸ್ ಅಧ್ಯಕ್ಷರು

ಟೋಕಿಯೊ— ಕಾಂಗ್ರೆಸ್ ಅಧ್ಯಕ್ಷರು ಶ್ರೀ ನಿಜಲಿಂಗಪ್ಪನವರು ಜಪಾನ್ ಪ್ರಧಾನಿ ಇಸಾಕು ಸಾಟೋರೊಡನೆ ಒಂದು ಗಂಟೆ ಮಾತುಕತೆ ನಡೆಸಿದರು.

★

ಪಾಕಿಸ್ತಾನಕ್ಕೆ ಸಕ್ಕರೆ

ಪಾಕಿಸ್ತಾನವು ಥೈಲ್ಯಾಂಡಿಂದ 1200 ಟನ್ನು ಸಕ್ಕರೆ ಪಡೆದಿದೆ — ರಷ್ಯಾ ಮತ್ತು ಪೋಲೆಂಡಿನಿಂದ ಅಲ್ಲಿಗೆ ಬಂದಿರುವ ಸಕ್ಕರೆ 30500 ಟನ್ನು ಗಳಷ್ಟು.

★

ಹೊಸ ಸಕ್ಕರೆ ಕಾರ್ಖಾನೆಗಳು

ಬೆಂಗಳೂರು— ಮೈಸೂರು ರಾಜ್ಯದಲ್ಲಿ ಎರಡು ಸಕ್ಕರೆ ಕಾರ್ಖಾನೆಗಳು ಸ್ಥಾಪಿಸಲಾಗುವುದೆಂದೂ, ಈಗ ರಾಜ್ಯದಲ್ಲಿ 9 ಸಕ್ಕರೆ ಕಾರ್ಖಾನೆಗಳಿರುವವೆಂದೂ, ಬೆಂಗಳೂರಿನಲ್ಲಿ ಒಂದು ನ್ಯೂನೀತ ಭೇಕ್ಷರಿ ಸ್ಥಾಪಿಸಲಾಗುವುದೆಂದೂ ಶ್ರೀ ರಾಜಶೇಖರಮೂರ್ತಿ ಮಂತ್ರಿಗಳು ಹೇಳಿದರು.

ಸಾಂಕೇತಿಕ ಮುಷ್ಕರ

ನವದೆಹಲಿ— ಕೇಂದ್ರ ಸರ್ಕಾರದ 2 ಮಿಲಿಯ ನೌಕರರ ಮೂರು ಹಿರಿಯ ಸಂಘಗಳು ಸೆಪ್ಟೆಂಬರು 19 ರಂದು ಸಾಂಕೇತಿಕ ಮುಷ್ಕರ ಹೂಡಲು ನಿರ್ಧರಿಸಿವೆ.

★

ಪ್ರವಾಹ ಸಂತ್ರಸ್ತರಿಗೆ

ಬೆಂಗಳೂರು— ದಕ್ಷಿಣ ಕನ್ನಡದ ಪ್ರವಾಹ ಸಂತ್ರಸ್ತರಿಗೆ 1000 ಕ್ವಿಂಟಾಲ್ ಮಿಲೋ, 500 ಕ್ವಿಂಟಾಲ್ ಗೋಧಿಯನ್ನು ಸರಕಾರ ಬಿಡುಗಡೆ ಮಾಡಿದೆ.

★

ಪಾಕಿಸ್ತಾನ ಸೈನ್ಯ

ನವದೆಹಲಿ— ಪಾಕಿಸ್ತಾನವು 1965 ಆಗಸ್ಟ್-ಸೆಪ್ಟೆಂಬರಿನಲ್ಲಿ ಹೊಂದಿದ್ದರವಕ್ಕಿಂತ ಹೆಚ್ಚಷ್ಟು ಸಶಸ್ತ್ರ ಸೈನಿಕರನ್ನು ಹೊಂದಿರುವುದಾಗಿ ರಾಜ್ಯಸಭೆಯಲ್ಲಿ ತಿಳಿಸಲಾಯಿತು.

1087371 ವಿದ್ಯಾವಂತ ನಿರುದ್ಯೋಗಿಗಳು

ನವದೆಹಲಿ— ಈ ಜನವರಿ 1 ರಂದು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ರಿಜಿಸ್ಟರ್ ಪ್ರಕಾರ 1087371 ವಿದ್ಯಾವಂತ ನಿರುದ್ಯೋಗಿಗಳಿದ್ದರೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

ಸಣ್ಣ ಪತ್ರಿಕೆಗಳಿಗೆ ಅಂಚೇದರ

ನವದೆಹಲಿ— ಸಣ್ಣ ಪತ್ರಿಕೆಗಳಿಗಿರುವ ಅಂಚೇದರದ ಬಗ್ಗೆ ಪುನರಾಲೋಚಿಸುವುದಾಗಿ ಸಂಪರ್ಕ ಸ್ಟೇಟ್ ಮಂತ್ರಿಯವರು ಲೋಕಸಭೆಯಲ್ಲಿ ತಿಳಿಸಿದರು.

ಮೈಸೂರು ಮುಖ್ಯಮಂತ್ರಿಗಳಿಗೆ ಸನ್ಮಾನ

ಹೈದರಾಬಾದು— ಉಸ್ಮಾನಿಯಾ ಪದವೀಧಾರ ಸಂಘದವರು ಮೈಸೂರು ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರ ಗೌರವಾರ್ಥವಾಗಿ ಸತ್ಕಾರ ಕೂಟ ಏರ್ಪಡಿಸಿದ್ದರು – ಉಸ್ಮಾನಿಯಾ ವಿಶ್ವವಿದ್ಯಾಲಯದ ಸ್ವರ್ಣ ಮಹೋತ್ಸವಕ್ಕೆ ಶ್ರೀ ಪಾಟೀಲರು ರೂ. 3.25 ಲಕ್ಷ ಕೊಟ್ಟಿರುವದಕ್ಕೆ ಆಂಧ್ರ ಮುಖ್ಯ ಮಂತ್ರಿಗಳು ವಂದಿಸಿದರು – ಆಂಧ್ರವು ಮೈಸೂರಿಗೆ ಅಕ್ಕಿಯನ್ನೂ, ಮೈಸೂರು ಆಂಧ್ರಕ್ಕೆ ವಿದ್ಯುಚ್ಛಕ್ತಿಯನ್ನೂ ಸರಬರಾಜು ಮಾಡತ್ತಿರೆಯೆಂದು ಶ್ರೀಪಾಟೀಲರು ಹೇಳಿದರು.

ಅದ್ಭುತ ಶಸ್ತ್ರ ಚಿಕಿತ್ಸೆ

ಮಾಸ್ಕೋ— ಎಡಗೈನಲ್ಲಿ ಬೆರಳಿಲ್ಲದೇ ಹುಟ್ಟಿದ ಒಂದು ನ್ಯೂಜಲ್ಯಾಂಡು ಹುಡುಗಿಗೆ ರಷ್ಯಾ ಶಸ್ತ್ರ ಚಿಕಿತ್ಸಾ ವೈದ್ಯರು ಬೆಟ್ಟುಗಳನ್ನು ಸೇರಿಸಿದರು.

ವಿದ್ಯಾವಂತ ಮಹಿಳೆಯರಿಗೆ

ಧಾರವಾಡ— ವಿದ್ಯಾವಂತ ಮಹಿಳೆಯರು, ಗ್ರಾಮಾಂತರಗಳಲ್ಲಿರುವ ಅವರ ಸಹೋದರಿಯರನ್ನು ಉತ್ತಮಗೊಳ್ಳಲು ಸಹಾಯ ಮಾಡಬೇಕು, ಎಂದು ಉಪ ಮಂತ್ರಿ, ಶ್ರೀಮತಿ ಬಸವರಾಜೇಶ್ವರಿಯವರು ತಿಳಿಸಿದರು.

ದಶಮಾಂಶ ಕ್ರಮ

ಲಂಡನ್— ಜ್ಞೇವರಿಗೆ ದಶಮಾಂಶ ಕ್ರಮದ ಶ್ರೇಷ್ಠತೆ ಪೂರ್ಣ ನಂಬಿಕೆ ಹೊಂದಲಾಗಲಿಲ್ಲವೆಂದು ಪ್ರಿನ್ಸ್ ಫಿಲಿಪ್ ಹೇಳಿದರು.

Golden Jubilee of 'Satyavadi'

The golden jubilee of the 'Satyavadi' is to be celebrated on July 28th.

The President, the Prime Minister, H. H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah, Sri Madhav Shenoi, Sri Opera Talkies, Padmabhushana Dr. M. C. Modi, Dr. R. S. Nanjunda Swamy (Glasgow) have generously extended donations and best wishes.

It is welknown that golden jubilee of newspapers in India is rare and almost unknown in Mysore state. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

ಅಶೋಕ ಪಬ್ಲಿಸಿಟೀಸ್

ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧದ ಆಯುರ್ವೇದ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ

Quality Printing — Neat Binding

Lakshminarasimha Press

Sivarampet, Mysore

ಪುಡ್‌ಗಾಂಡ್ ಆಕೋಶ 5 ನೇ ವಾರ

— ಮನಮೋಹಕ ಈಸ್ಮ್ಯಾನ್ ಕಲರ್ ಹಿಂದಿ ಚಿತ್ರ —

Jhuk Gaya Aasman

ಜುಕ್ ಗಯಾ ಆಸ್ಮಾನ್

ಪಾತ್ರ — ರಾಜೇಂದ್ರಕುಮಾರ್, ಸೈರಾಬಾನು, ಪ್ರೇಂ ಚೋಪ್ರ, ರಾಜೇಂದ್ರನಾಥ್

ಸಂಗೀತ— ಶಂಕರ್ ಜೈಕಿಷನ್ [ದಿನ 3 ಪ್ರದರ್ಶನಗಳು]

ಆಪೇರ— ಜನಪ್ರಿಯ 4 ನೇ ವಾರ

ಚಿತ್ತಾಕರ್ಷಕ ಕನ್ನಡ ಚಿತ್ರ

ನಮ್ಮ ಊರು

ಪಾತ್ರ — ಉದಯ ಕುಮಾರ್ ಅಶ್ವತ್ಥ್ ದಾಲಕೃಷ್ಣ ಕೃಷ್ಣಕುಮಾರಿ

Help The Gorakshana

ಗೋರಕ್ಷಣೆಗೆ ಬೆಂಬಲ ನೀಡಿ

ಶ್ರೀದಿವ್ಯಶಕ್ತಿ ಜಗದ್ಗುರು ಮಹಾಸನ್ನಿಧಾನಿಗಳವರು ಶ್ರೀ ಶೃಂಗೇರಿ ಜಗದ್ಗುರು ಮಹಾಸನ್ನಿಧಾನಿಗಳವರ ಉದಾತ್ತ ಅನುಗ್ರಹ ಕೃಪೆಯಾಶೀರ್ವಾದ

ಕರ್ನಾಟಕದಲ್ಲಿ ಗೋರಕ್ಷಣೆ ವಾತ್ಸಲ್ಯದಿಂ, ತತ್ಸಂಬಂಧಿತ, ಪಶುವೈದ್ಯ, ವಿಚಾರಗಳ ವೈಜ್ಞಾನಿಕ ಪ್ರಚಾರಕ್ಕಾಗಿ ಪ್ರಾರಂಭಿಸಲ್ಪಟ್ಟಿರುವ ಮಾಸಪತ್ರಿಕೆ : ವಾರ್ಷಿಕ ಚಂದಾ 50 ಪೈಸೆ

— ಗೋದಕ್ಷಿಣೆ ವ್ಯವಸ್ಥಾಪಕರು ವಿನಂತಿ —

ಗೋರಕ್ಷಣಾರ್ಥ ಜೋಳಿಗೆಗಳನ್ನೂ ಪ್ರೋತ್ಸಾಹಕ ಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು!!

ಚಂದಾವಾಯಿದೆ ಕಳಿಸಿಕೊಟ್ಟವರು ಇವರಿಗೆ ಚಂದಾ ವಾಪಸು ಬರಬೇಕಾಗಿ ವಿನಂತಿ

ಡಾ|| ಪಿ ಎಸ್ ನಾರಾಯಣ್, ಶ್ರೀ ಪಿ.ಎಸ್ ವಿಶ್ವನಾಥ್ ಜಯನಗರ, ಶೃಂಗೇರಿ

ಶ್ರೀ ಬಿ ಜಿ. ಶಾಮ್ಯೂಯಗಳು, 1030 ವಿದ್ಯಾರಣ್ಯಪುರಂ, ಮೈಸೂರು

ಶ್ರೀ ಅನಂತನಂಜಯ್ಯಂಗಾರ್, ಶಾಸ್ತ್ರಧರ್ಮ ಪ್ರಚಾರಸಭಾ, ಹೊಯ್ಸಳಕರ್ನಾಟಕ ಗೋರಕ್ಷಣಾ ಅಪೀಸು ಶಕ್ತಿವಿಹಾರ್ ಚಾಮುಂಡಿಪುರಂ ಮೈಸೂರು 4

ವಿಳಾಸ — ಗೋರಕ್ಷಣಾ ಆಫೀಸು 1067 ಚಾಮರಾಜಪುರಂ, ಮೈಸೂರು

Cow Slaughter should be banned Immediately

.....

ಗೋವಧೆ ಕೂಡಲೆ ನಿಷೇಧವಾಗಲಿ

Protect the Cow

★

ಗೋರಕ್ಷಣೆ ಮುಖ್ಯ ಪ್ರತಿಯೊಬ್ಬರ ಕರ್ತವ್ಯಗಳು ಹೆಚ್ಚೆ ಚಾಚ್ಚಿ ನಡೆಯುಲಿ

Edited, Printed & Published by Dharmaprachara Niyata M S Krishna Rao (Proprietor) at the Satyavadi Press Chamarajapuram, Mysore 4